ಶ್ರೀ ವಿ. ವಿ. ಪತ್ತಾರ್.—ಬಿಜಾಪುರ ಜಿಲ್ಲೆಯಲ್ಲಿ ಜಮಖಂಡಿ, ಮಂಥೋಳ್ ತಾಲ್ಲೂಕುಗಳಲ್ಲಿ ಮತ್ತು ಬೆಳಗಾಂ ಜಿಲ್ಲೆಯ ಗೋಕಾಕ್ ಮತ್ತು ರಾಯಭಾಗಕ್ಕೆ ಬರುವ ಘಟಪ್ರಭಾ ಲೆಫ್ಟ್ ಕೆನಾಲ್ ಇದೆ. ಅಲ್ಲಿ ಸುಮಾರು ೨೦-೨೫ ವರ್ಷಗಳಿಂದ ಆಯಕಟ್ಟು ಪ್ರದೇಶದಲ್ಲಿ ರಸ್ತೆಗಳನ್ನು ದುರಸ್ತಿ ಮಾಡಿಸಿಲ್ಲ. ಈ ರಸ್ತೆಗಳು ಎಷ್ಟು ಕೆಟ್ಟು ಹೋಗಿದೆ ಎಂದರೆ ವಾಹನಗಳನ್ನು ಅಲ್ಲಿ ಒಯ್ಯುವುದಕ್ಕೆ ಆಗುವುದಿಲ್ಲ. ಚಕ್ಕಡಿಗಳನ್ನು ಸಹಾ ನಡೆಸುವುದಕ್ಕೆ ಅವಕಾಶವಿಲ್ಲದಂತಹ ಪರಿಸ್ಥಿತಿ ಇದೆ. ಲೋಕೋಪಯೋಗಿ ಇಲಾಖೆಯವರು ಆ ರಸ್ತೆಗಳನ್ನು ನಮಗೆ ವಹಿಸಿಕೊಟ್ಟಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ರಸ್ತೆಗಳನ್ನು ದುರಸ್ತುಮಾಡುವ ಬಗ್ಗೆ ಏನಾದರೂ ಒಂದು ಪರಿಹಾರ ಕಲ್ಪಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈಗ ಮಾನ್ಯ ಸದಸ್ಯರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ, ಆ ಎರಡು ಪ್ರಶ್ನೆಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಈ ರಸ್ತೆಗಳಿಗೆ ಸಂಬಂಧಪಟ್ಟಹಾಗೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡುತ್ತಿದ್ದಾರೆ. ಈ ಕೆಲಸವನ್ನು ಮಾಡಬೇಕಾದರೆ ಸುಮಾರು ೧೦ ೧೫ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರ (ಆ) ಪ್ರಶ್ನೆಗೆ ಉತ್ತರವಾಗಿ ನಾವು ಹೌದು ಎಂದು ಒಪ್ಪಿಕೊಂಡಿದ್ದೇವೆ.

ಶ್ರೀ ವಿ. ವಿ. ಪತ್ತಾರ್.—ಎಷ್ಟು ದಿವಸಗಳಲ್ಲಿ ಈ ರಸ್ತೆಗಳ ದುರಸ್ತು ಕೆಲಸವನ್ನು ಮಾಡಿ ಕೊಡುತ್ತೀರಾ ? ಇದಕ್ಕೆ ಏನಾದರೂ ಒಂದು ಕಾಲವನ್ನು ನಿಗದಿ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆದಷ್ಟು ಬೇಗ ಮಾಡಿಕೊಡಬೇಕು ಎಂದು ನಾವು ಪ್ಲಾನ್ ಮಾಡುತ್ತಿದ್ದೇವೆ.

Abolition of District Level 7th Standard Examination.

883. [SRI M. GANGANNA (Kustagi) SRI B. B CHIMMANAKATTI (Badami). — Will the Minister for Education be pleased to state :—

(a) whether it is a fact that the District Level Examination of the 7th Standard is abolished from the current year ;

(b) if so, the action taken to provide admissions to the High Schools for those who paPassed Standard by School Examination ?

SRI G. B. SHANKAR RAO (Minister for Education). —

(a) Yes.

(b) Action has been taken to open additional High Schools and additional sections in existing High Schools.

Sir, this question requires a small clarification. Perhapes, the question was sent before 31st March, 1980 and now tsh answer is before this House, The 7th Standard District. lelvle examination was abolished in the year 1980 *i.e.*, from the previous year whereas in the printed answer it is mentioned from the current year.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಹೆಚ್ಚಿನ ಸಂಖ್ಯೆಯ ಪ್ರೌಢಶಾಲೆಗಳನ್ನು ತೆರೆಯಲು ಹಾಗೂ ಈಗಿರುವ ಪ್ರೌಢಶಾಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತರಗತಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ ಹಾಗಾದರೆ ಮುಖ್ಯವಾಗಿ ೭ನೇ ದರ್ಜೆಯ ಶಾಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರೌಢಶಾಲೆಗಳಲ್ಲಿ ಪ್ರವೇಶಾವಕಾಶವನ್ನು ಒದಗಿಸಲು ಅವರಿಗೆ ತೊಂದರೆಯಾಗದಂತೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಸರ್ಕಾರಿ ಪ್ರೌಢ ಶಾಲೆ

ಗಳನ್ನು ತೆರೆದಿದ್ದೀರಿ, ಮತ್ತು ಎಷ್ಟು ಪ್ರೌಢಶಾಲೆಗಳನ್ನು ತೆರೆದಿದ್ದೀರಿ ಎಂಬುದನ್ನು ತಿಳಿಸುತ್ತೀರಾ ? ಮುನೇ ಒನೇ ದರ್ಜೆಯ ಜಿಲ್ಲಾ ಮಟ್ಟದ ಪಬ್ಲಿಕ್ ಪರೀಕ್ಷೆಯನ್ನು ಪ್ರಾರಂಭ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಹೋದವರ್ಷ ತಾವು ಒನೇ ದರ್ಜೆಯ ಪರೀಕ್ಷೆಯನ್ನು ಬಂದ್ ಮಾಡಿದ್ದಾರೆ. ಆದ್ದರಿಂದ ಇಷ್ಟು ಶೀಘ್ರವಾಗಿ ಆ ಪರೀಕ್ಷೆಯನ್ನು ಪ್ರಾರಂಭ ಮಾಡುವ ವಿಚಾರ ಸರ್ಕಾರಕ್ಕೆ ಇಲ್ಲ. ಈ ವರ್ಷ ಖಾಸಗೀ ಪ್ರೌಢ ಶಾಲೆಗಳನ್ನೂ ಮತ್ತು ಸರ್ಕಾರಿ ಪ್ರೌಢ ಶಾಲೆಗಳನ್ನು ಮತ್ತಷ್ಟು ಮಂಜೂರು ಮಾಡಲಾಗಿದೆ. ಸರ್ಕಾರಿ ಪ್ರೌಢ ಶಾಲೆಗಳ ಬಗ್ಗೆ ಹೇಳುವುದಾದರೆ ೧೨೫ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಒನೇ ದರ್ಜೆಯ ಪರೀಕ್ಷೆಯನ್ನು ರದ್ದು ಮಾಡಬೇಕಾದಂತಹ ಪ್ರಸಂಗ ಏನು ಬಂತು ? ಅಂಥಾ ಒತ್ತಡ ಏನಿತ್ತು ? ಇದನ್ನು ಯಾವ ಹಂತದಲ್ಲಿ ನಿರ್ಧಾರ ತೆಗೆದುಕೊಂಡಿದ್ದೀರಿ, ಮಕ್ಕಳ ಭವಿಷ್ಯದ ಬಗ್ಗೆ ಈ ನಿರ್ಣಯ ತೆಗೆದುಕೊಳ್ಳಬೇಕಾದರೆ ಅಂಥಾ ಪ್ರಬಲವಾದ ಕಾರಣ ಏನಿತ್ತು ?

ಶ್ರೀ ಜಿ. ಬಿ. ಶಂಕರರಾವ್.—ವಿದ್ಯಾಮಂತ್ರಿಗಳು ನಮ್ಮ ಕೊಠಡಿಯಲ್ಲಿ ವಿದ್ಯಾ ತಜ್ಞರನ್ನು ಕರೆಸಿ ನಿರ್ಣಯ ತೆಗೆದುಕೊಂಡಿದ್ದಾರೆ. ಇದನ್ನು ರದ್ದು ಮಾಡುವುದಕ್ಕೆ ಕಾರಣವೇನೆಂದರೆ ಒನೇ ದರ್ಜೆಯ ಪರೀಕ್ಷೆಯಲ್ಲಿ ಮಕ್ಕಳಿಗೆ ಭಯವುಂಟಾಗುತ್ತದೆ. ಅವರ ಮನಸ್ಸಿಗೆ ಭಾರವಾಗುತ್ತದೆ, ಆ ವಯಸ್ಸಿನಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವುದು ಸಮರ್ಪಕವಾಗುವುದಿಲ್ಲ ಎಂದು ಈ ಪರೀಕ್ಷೆಯನ್ನು ತೆಗೆದುಹಾಕಲಾಯಿತು.

ಶ್ರೀ ವಿ. ಎಸ್. ಶಿವಣ್ಣ.—ಈಗ ನೀವು ವಿದ್ಯಾ ಪರಿಣತರನ್ನು ಕರೆಸಿ ಮಾಡಿರುವುದು ಸರಿ. ಆದರೆ ಈಗ ಸರ್ಕಾರದವರು ತೆರೆದಿರತಕ್ಕ ೧೨೫ ಶಾಲೆಗಳು ಸಾಕಾಗುವುದಿಲ್ಲ. ಆದ್ದರಿಂದ ಇನ್ನೂ ಹೆಚ್ಚು ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಈಗ ಸಾಕಷ್ಟು ಖಾಸಗಿ ಮತ್ತು ಸರ್ಕಾರಿ ಶಾಲೆಗಳನ್ನು ತೆರೆಯಲಾಗಿದೆ ಜೊತೆಗೆ ೭೦೦ ವಿಭಾಗಗಳನ್ನು ಲೆಕ್ಕ ಹಾಕಿ ಕೊಟ್ಟಿದ್ದೇನೆ. ವಿದ್ಯಾಭ್ಯಾಸದ ಗುಣ ಮಟ್ಟ ಚೆನ್ನಾಗಿರಬೇಕು ಎಂದು ಹೇಳಿದೆ. ಈಗ ಇರತಕ್ಕ ಶಾಲೆಗಳಲ್ಲಿ ಹೆಚ್ಚು ತರಗತಿಗಳನ್ನು ತೆರೆದಿರುವುದರಿಂದ ಎಲ್ಲಾ ವಿದ್ಯಾರ್ಥಿಗಳಿಗೂ ಸಾಕಷ್ಟು ಸ್ಥಳಾವಕಾಶ ಸಿಕ್ಕುತ್ತದೆ ಎಂದು ಸರ್ಕಾರದ ಭಾವನೆ.

ಶ್ರೀ ಎಂ. ಸಿ. ಬಸಪ್ಪ.—ಈಗ ಸಾಕಷ್ಟು ಶಾಲೆಗಳನ್ನು ತೆರೆದಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಶಾಲೆಗಳನ್ನು ತೆರೆದಿಲ್ಲ. ಎಲ್ಲಿ ಅವಶ್ಯಕತೆ ಇಲ್ಲ ಅಲ್ಲಿ ಶಾಲೆಗಳನ್ನು ತೆರೆದಿದ್ದಾರೆ. ಈಗ ತಾವು ೧೨೫ ಶಾಲೆಗಳನ್ನು ಒಂದೇ ಆರ್ಡರಿನಲ್ಲಿ ಮಂಜೂರು ಮಾಡಿದ್ದೀರೋ ಅಥವಾ ರಾಜಕೀಯ ಒತ್ತಡದ ಮೇಲೆ ಇನ್‌ಸ್ಟಾಲ್‌ಮೆಂಟ್ ಮೇಲೆ ಮಂಜೂರು ಮಾಡಿದ್ದೀರೋ ?

ಶ್ರೀ ಜಿ. ಬಿ. ಶಂಕರರಾವ್.—ಬೇಡಿಕೆ ಆಧಾರದಮೇಲೆ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿಗೆ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. ರಾಜಕೀಯ ಒತ್ತಡದ ಮೇಲೆ, ಪ್ರಭಾವದ ಮೇಲೆ ಶಾಲೆಗಳನ್ನು ಮಂಜೂರು ಮಾಡಿಲ್ಲ. ಮೊದಲನೆ ಆರ್ಡರ್‌ನಲ್ಲಿ ೧೦೦–೧೧೫ ಶಾಲೆಗಳನ್ನು ಎರಡನೇ ಆರ್ಡರಿನಲ್ಲಿ ೧೦ ಶಾಲೆಗಳನ್ನು ಹೀಗೆ ಎರಡು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಮಂಜೂರು ಮಾಡಿದ್ದೇವೆ. ಸಾರ್ವಜನಿಕರು ಶಾಲೆ ಬೇಕು ಎಂದು ಅರ್ಜಿ ಹಾಕಿದಾಗ ಅದನ್ನು ಪರಿಶೀಲನೆ ಮಾಡಿ ನಾವು ನಿರ್ಣಯ ತೆಗೆದುಕೊಂಡಿದ್ದೇವೆ

ಶ್ರೀ ಎಂ. ಗಂಗಣ್ಣ.—ನಾನು ಕಾಲ್ ಅಟೆನ್‌ಷನ್ ರೂಪದಲ್ಲಿ ಇದನ್ನು ಕಳುಹಿಸಿದ್ದೆ. ೧೯೭೮–೭೯ನೇ ಸಾಲಿನಲ್ಲಿ ೩ ಲಕ್ಷ ವಿದ್ಯಾರ್ಥಿಗಳು ಹೈಸ್ಕೂಲಿಗೆ ಬಂದಿದ್ದಾರೆ ಇದು ವರ್ಷಕ್ಕೆ ಎರಡು ಪಟ್ಟು ಜಾಸ್ತಿಯಾಗುತ್ತದೆ. ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಹಿಂದೆ ಉತ್ತರ ಕೊಟ್ಟಿರುವುದು ಈ ರೀತಿ ಇದೆ.

ಮಾನ್ಯ ಶಿಕ್ಷಣ ಸಚಿವರು ೨೪-೪-೮೦ರಂದು ಹೀಗೆ ಹೇಳಿದ್ದಾರೆ.—

"ಸರ್ಕಾರಕ್ಕೆ ಇದೊಂದು ಸಮಸ್ಯೆಯೇ ಅಲ್ಲ. ಇನ್ನೂ ಹೆಚ್ಚು ಸೆಕ್ಷನ್‌ಗಳನ್ನು ತೆರೆದು ಪ್ರೌಢಶಾಲೆಗೆ ಪ್ರವೇಶಾವಕಾಶ ಬಯಸುವ ವಿದ್ಯಾರ್ಥಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಲಾಗುವುದು. ಮತ್ತೆ ಒನೇ ತರಗತಿ ಪಬ್ಲಿಕ್ ಪರೀಕ್ಷೆ ನಡೆಸುವ ಯೋಚನೆ ಇಲ್ಲ"

ಎಂದು ಹೇಳಿದ್ದಾರೆ. ಮತ್ತೆ ಐದೇ ದಿವಸಗಳಲ್ಲಿ ಧಾರವಾಡದಲ್ಲಿ ಮಾನ್ಯ ಸಚಿವರು ಪುನಃ ಈ ರೀತಿ ಹೇಳಿದ್ದಾರೆ.—

"ಏಳನೆಯ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸುವ ಬಗ್ಗೆ ಸರ್ಕಾರ ಮತ್ತೆ ತೀವ್ರವಾಗಿ ಯೋಚಿಸುತ್ತಿದೆ. ಹಿಂದಿನ ಸರ್ಕಾರ ತೆಗೆದುಕೊಂಡ ತೀರ್ಮಾನದಿಂದಾಗಿ ಶಿಕ್ಷಣ ಮಟ್ಟಕ್ಕೆ ಧಕ್ಕೆ ಯುಂಟಾಗಿದೆ"

ಅನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನೋಡಿದರೆ ಈ ಬಗ್ಗೆ ಏನೂ ಯೋಚನೆ ಮಾಡದೆ ಒಮ್ಮಿಂದ ಒಮ್ಮೆಲೇ ಇದನ್ನು ತೆಗೆದು ಮತ್ತೆ ಈ ಪರೀಕ್ಷೆಯನ್ನು ನಡೆಸುವುದಕ್ಕೆ ಸೂಕ್ತ ನಿರ್ಣಯ ತೆಗೆದುಕೊಂಡಿದ್ದೀರಲ್ಲಾ, ಈ ಸಂದರ್ಭಗಳಿಗೆಲ್ಲಾ ಬೇಕಾದ ಹಾಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಜವಾಬ್ದಾರರು ಯಾರು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಜೆ. ಬಿ. ಶಂಕರರಾವ್.—ಎಲ್ಲಾ ಸಂದರ್ಭಗಳಲ್ಲೂ ಬೇಕಾದ ಹಾಗೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಜವಾಬ್ದಾರರು ಯಾರು ಎಂದರೆ–ನಾವೂ [ನೀವೂ ಎಲ್ಲಾ ಜವಾಬ್ದಾರರೇ. ಏತಕ್ಕೆಂದರೆ ನೀವು ಪತ್ರಿಕೆಯಲ್ಲಿ ಬಂದಿರತಕ್ಕಂಥಾ ಹೇಳಿಕೆಯನ್ನು ಹೇಳಿದ್ದೀರಿ ಅದರಲ್ಲಿ ಎಷ್ಟು ಸತ್ಯ ಎಷ್ಟು ಅಸತ್ಯ ಇದೆ ಅನ್ನುವುದನ್ನು ನೋಡಬೇಕು. ಈ ಒಂದು ವಿಷಯ ಪಿಪ್ರಿಲ್‌ನಿಂಗಳಿನಲ್ಲಿ ಹೊರಬಿದ್ದಿದೆ. ಆವಾಗ ಪ್ರೌಢಶಾಲೆಗೆ ವಿದ್ಯಾರ್ಥಿಗಳು ಎಷ್ಟು ಬರುತ್ತಾರೆ ಅನ್ನುವ ಸರಿಯಾದ ಒಂದು ಲೆಕ್ಕ ಇರಲಿಲ್ಲ. ತಮಗೆ ಹೇಳಬೇಕಾದರೆ ೧೯೭೯ರ ಮಾರ್ಚಿನಲ್ಲಿ ಇದರ ಪರಿಣಾಮ ೧೦೦ಕ್ಕೆ ೭೫ರಷ್ಟು ಆಗಿದೆ. ಈ ಒನೇ ತರಗತಿಯ ಪರೀಕ್ಷೆಯನ್ನು ಈ ವರ್ಷ ತೆಗೆದುಹಾಕಿದ್ದರಿಂದ, ಈ ವರ್ಷ ಅದರ ಪರಿಣಾಮ ೧೦೦ಕ್ಕೆ ೯೨ರಷ್ಟು ಆಗಿದೆ. ಅದರಿಂದಾಗಿ ಈ ವರ್ಷ ೯೩ ಸಾವಿರ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಯಿತು. ಇಷ್ಟು ಜಾಸ್ತಿ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದುದರಿಂದ ನಾವು ಈ ಒಂದು ವ್ಯವಸ್ಥೆ ಮಾಡಬೇಕಾಗಿ ಬಂದಿತು. ಏನು ವ್ಯವಸ್ಥೆ ಎಂದರೆ ಹೊಸದಾಗಿ ೨೨೫ ಪ್ರೌಢಶಾಲೆಗಳನ್ನು ತೆರೆಯಬೇಕಾಗಿ ಬಂತು, ಇದರ ಜೊತೆಗೆ ಹೊಸದಾಗಿ ೭೦೦ ತರಗತಿಗಳು ಇರತಕ್ಕಂಥಾ ಪ್ರೌಢಶಾಲೆಗಳಲ್ಲಿಯೇ ತೆರೆಯುವುದಕ್ಕೆ ಅನುಮತಿ ಕೊಡಬೇಕಾಗಿ ಬಂದಿತು.

ಶ್ರೀ ಪಿ. ರಾಮದೇವ್.—ಸ್ವಾಮಿ, ಎಲ್ಲಾ ಪರೀಕ್ಷೆಯನ್ನು ಕೂಡ ರದ್ದು ಮಾಡಿಬಿಟ್ಟರೆ ಆಗ ಎಲ್ಲರೂ ಪಾಸಾಗುತ್ತಾರೆ. ಎಲ್ಲಾ ಪರೀಕ್ಷೆಗಳನ್ನು ರದ್ದು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜೆ. ಬಿ. ಶಂಕರರಾವ್.—ಒಬ್ಬ ಸದಸ್ಯರು ಹಾಗೆ ಹೇಳುತ್ತಾರೆ, ಒಬ್ಬ ಸದಸ್ಯರು ಹೀಗೆ ಹೇಳುತ್ತಾರೆ. ಈಗ ತಾವೇ ನೋಡಿ ಒಬ್ಬ ಸದಸ್ಯರು ಈ ವರ್ಷ ೧೦೦ಕ್ಕೆ ೯೨ರಷ್ಟು ಪಾಸಾಗಿದ್ದುದರಿಂದ ಇದರ ಗುಣಮಟ್ಟ ಸರಿಯಾಗಿಲ್ಲ ಎಂದು ಹೇಳುತ್ತಾರೆ ಇನ್ನೊಬ್ಬ ಸದಸ್ಯರು ಇದರ ಗುಣಮಟ್ಟ ಸರಿಯಾಗಿದೆ ಎಂದು ಹೇಳುತ್ತಾರೆ. ಒಬ್ಬರು ಹಾಗೆ ಒಬ್ಬರು ಹೀಗೆ ಹೇಳುವುದರಿಂದ ಇದನ್ನು ಮುಂದೆ ಇಡುವುದು ಸರಿಯೇ ಇಲ್ಲವೇ ಎನ್ನುವುದನ್ನು ನೀವೇ ತಿಳಿದುಕೊಳ್ಳಿ.

Construction of Bus Stand at Chickamagalur

940 SRI C. A. CHANDREGOWDA (Chickamagalur)—Will the Minister for Transport and Minor Irrigation be pleased to state.—

(a) the reasons for delay in the construction work of Bus-Stand at Chickamagalur.

(b) when its construction work would be completed;